# ಇಚ್ಛಾಮರಣ

ಹುಟ್ಟು ಮತ್ತು ಸಾವು ಇವೆರಡರ ರಹಸ್ಯವನ್ನು ತಿಳಿಯಲು ಹಿಂದಿನಿಂದಲೂ ಹಲವರು ಯತ್ನಿಸಿದ್ದಾರೆ. ಹುಟ್ಟಿನ ಗುಟ್ಟನ್ನು ಭೇದಿಸಲು ಯಾವ ಸಾಧನಗಳೂ ಇಲ್ಲವಾಗಿವೆ. ಮರಣದ ಗುಟ್ಟನ್ನು ತಿಳಿಯಲು ನಮಗೆ ಇಂದಿಗೂ ಸಾಧ್ಯ ಆಗಿಲ್ಲ. ವಚನಕಾರರು 'ಮರಣವೇ ಮಹಾನವಮಿ' ಎಂದಿದ್ದುಂಟು. ಮರಣ, ಸಂಭ್ರಮಕ್ಕೆ ಕಾರಣ ಎಂಬುದು ಇಲ್ಲಿ ನಿಶ್ಚಿತ. ಈಗಲೂ ಅನೇಕ ಆದಿವಾಸಿಗಳಲ್ಲಿ ಶವವನ್ನು ಬಯಲಿನಲ್ಲಿಟ್ಟು ಸಂಭ್ರಮಪಡುತ್ತಾರೆ. ಅದರ ಪಳೆಯುಳಿಕೆಗಳು ಈಗಲೂ ತಮಿಳುನಾಡಿನ ಕಡೆಗೂ ಉತ್ತರದ ಗುಡ್ಡಗಾಡುಗಳ ಕಡೆಗೂ ಆಚರಣೆಯಲ್ಲಿ ಉಂಟು. ತತ್ವಪದಕಾರರು ತಮ್ಮ ತತ್ವಪದಗಳಲ್ಲಿ 'ಮರಣ'ದ ರಹಸ್ಯವನ್ನು ಸೂಕ್ಷ್ಮವಾಗಿ ಪ್ರತಿಬಿಂಬಿಸಿದ್ದಾರೆ. ಶ್ರೀಶಂಕರರು ಗುಹಾಪ್ರವೇಶ ಮಾಡಿದರೆಂದೂ ಅದೃಶ್ಯರಾದರೆಂಬ ಆ ಸಂಪ್ರದಾಯದವರ ಹೇಳಿಕೆಗಳಿವೆ. ಕಾಶ್ಮೀರಶೈವದರ್ಶನದ ಅಭಿನವಗುಪ್ತಪಾದರು ನೂರಾರು ಜನ ಶಿಷ್ಯರೊಡನೆ ಗುಹಾಪ್ರವೇಶ ಮಾಡಿದರೆಂಬ ಐತಿಹ್ಯವೂ ಉಂಟು. ವ್ಯೋಮರೂಪಿ ಅಲ್ಲಮಪ್ರಭು ಕದಳಿಯಲ್ಲಿ ಐಕ್ಯರಾದರೆಂಬ ನಂಬಿಕೆ ಉಂಟಲ್ಲ.

ಭಾರತೀಯ ಸಂತಚರಿತ್ರೆಯಲ್ಲಿ 'ಮರಣ'ದ ಬಗೆಗೆ ಹಲವು ನೆಲೆಗಳಿವೆ. ಮಹಾಭಾರತದ ಭೀಷ್ಮ 'ಇಚ್ಛಾಮರಣಿ' ಎಂಬುದು ಲೋಕಪ್ರಸಿದ್ಧ. ಆದರೆ, ನಮ್ಮ ದೇಶದ ಸಂತರಲ್ಲಿ ಇಂಥ ದಿನ, ಇಂಥ ವೇಳೆಯಲ್ಲೇ ತಮ್ಮ 'ಮರಣ'ವೆಂದು ಹೇಳಿದ ಸಂತರಿಗೇನು ಕಡಿಮೆ ಇಲ್ಲ. ಅಥಣಿಯ ಶಿವಯೋಗಿಗಳು ತಮ್ಮ 'ಶಿವೈಕ್ಯ'ದ ದಿನ ಮತ್ತು ಸಮಯವನ್ನು ಕರಾರುವಾಕ್ಕಾಗಿ ಭಕ್ತರಿಗೆ ತಿಳಿಸಿದ್ದರು. ಅವರು ಆ ದಿನವೇ ಶರೀರವನ್ನು ತ್ಯಜಿಸಿದರು. ಇಂಥ ಪ್ರಸಂಗಗಳು ಹಲವಿವೆ. ಗೀತೆಯು ಶರೀರಕ್ಕೆ ಸಾವುಂಟು; ಆದರೆ, ಆತ್ಮಕ್ಕೆ ಸಾವಿಲ್ಲ ಎಂದು ಹೇಳಿರುವುದನ್ನು ಗಮನಿಸಬೇಕು. ಸಂತರು ದೇಹವೇ ಬೇರೆ; ದೇಹವನ್ನು ಆಶ್ರಯಿಸಿರುವ ಚೈತನ್ಯವೇ ಬೇರೆ ಎಂದು ಗಟ್ಟಿಯಾಗಿ ತಿಳಿದಿದ್ದರು. ದೇಹವು ನಾಶಗೊಳ್ಳುತ್ತದೆ. ಆದರೆ, ಆತ್ಮ ಅವಿನಾಶಿಯಾದುದು. ಈ ಹಿನ್ನೆಲೆಯಲ್ಲಿ ಸಂತರು ತಮ್ಮ ದೇಹವನ್ನು ತ್ಯಜಿಸಿದರೆಂಬುದು ಸತ್ಯ. ನಾವು ಇದನ್ನು 'ಮರಣ' ಎಂಬ ಪರಿಕಲ್ಪನೆಯಿಂದ ಕರೆಯುತ್ತಿದ್ದೇವೆ. ಹುಬ್ಬಳ್ಳಿಯ ಸಿದ್ಧಾರೂಢರು ತಮ್ಮ ದೇಹವನ್ನು ತ್ಯಜಿಸಿ, ಶಿಷ್ಯನಲ್ಲಿ 'ಬ್ರಹ್ಮೈಕ್ಯ'ರಾದರೆಂಬ ವಿವರಗಳು ಅವರ ಚರಿತ್ರೆಯಲ್ಲಿ ಕಂಡು ಬರುತ್ತದೆ. ಕಳೆದ ಶತಮಾನದ ಆರನೆಯ ದಶಕದಲ್ಲಿ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿಗೆ ಸೇರಿದ ವಿಡಪನಕುಂಟೆ ಎಂಬ ಗ್ರಾಮದಲ್ಲಿ ಗುಜ್ಜಪ್ಪಸ್ವಾಮಿ ಅಥವ ಗುಜ್ಜಪ್ಪತಾತ ಎಂಬ ಅವಧೂತರೊಬ್ಬರಿದ್ದರು. ಅವರು ಬುಡಕಟ್ಟು ಜನಾಂಗಕ್ಕೆ ಸೇರಿದವರು. ಅವರು ಹುಟ್ಟಿದ್ದು 1890ರ ಸುಮಾರಿಗೆ. ಅವರು ಆ ಕಾಲಕ್ಕೆ ಮೆಟ್ರಿಕ್ಯುಲೇಷನ್ ಪಾಸು ಮಾಡಿದ್ದವರು. ಕೆಲವು ದಿನ ಸರ್ಕಾರಿ ಕೆಲಸದಲ್ಲಿದ್ದು, ಅದು ಹಿಡಿಸದೆ ಊರಿಗೆ ವಾಪಸಾದರು. ಸಾಂಸಾರಿಕ ತಾಪತ್ರಯಗಳ ಬಗೆಗೆ ಅವರು ಎಂದೂ ತಲೆಕೆಡಿಸಿಕೊಂಡವರಲ್ಲ. ಇದ್ದಬದ್ದ ಆಸ್ತಿಯನ್ನು ಸಾಲಸೋಲಕ್ಕೆ ಕಳೆದುಕೊಳ್ಳಬೇಕಾಯಿತು. ಈ ನಡುವೆ ತತ್ವಸಾಧನೆಯ ಸೆಳೆತ. ಹೆಗಲ ಮೇಲೊಂದು ಕಂಬಳಿಹೊದ್ದು, ಸಾಧನೆಯ ಹಾದಿಯಲ್ಲಿ ನಡೆದರು. ವಿಡಪನಕುಂಟೆ ಪಕ್ಕದ ಗ್ರಾಮವೇ ಮೀರಾಸಾಬಿಹಳ್ಳಿ. ಆ ಊರಿನ ಪಟೇಲರು ಬೊಮ್ಮಣ್ಣ. ಭಜನೆ, ಸತ್ಸಂಗತತ್ವವಿಚಾರಗಳಲ್ಲಿ ಗುಜ್ಜಪ್ಪನ ಜತೆ ಸೇರುತ್ತಿದ್ದರು. ಈ ಗೋಷ್ಠಿಗಳಲ್ಲಿ ಆಗಾಗ್ಗೆ ಗಾಂಜಾ ಸೇದುತ್ತಿದ್ದದ್ದೂ ಉಂಟು. ಗುಜ್ಜಪ್ಪ ವಾಕ್ಸಿದ್ಧಿಯನ್ನು ಪಡೆದಿದ್ದರು. ಆದರೆ, ತುಂಬಾ ಮಿತಭಾಷಿ. ಗುಜ್ಜಪ್ಪ ಯಾರನ್ನಾದರೂ ಕಂಡರೆ ಮನಮುಟ್ಟಿ ಕಣ್ಮುಚ್ಚಿ ಎರಡೂ ಕೈಗಳನ್ನು ಎದೆ ಮೇಲೆ ಮುಗಿದುಕೊಂಡು 'ಓಂ ನಮಃ ಶಿವಾಯ' ಎಂದು ಹೇಳುತ್ತಿದ್ದರು. ಊರಿನ ಜನಕ್ಕೆ ಗುಜ್ಜಪ್ಪನನ್ನು ಕಂಡರೆ ವಿಶ್ವಾಸ, ಭಕ್ತಿ, ಅಭಿಮಾನ. ಪಟೇಲ ಬೊಮ್ಮಣ್ಣ ಗುಜ್ಜಪ್ಪರನ್ನು ಗುಜ್ಜಪ್ಪಸ್ವಾಮಿಗಳು ಎಂದೇ ಕರೆಯುತ್ತಿದ್ದರು.

ಬೆಳಗೆರೆ ಕೃಷ್ಣಶಾಸ್ತ್ರಿಗಳು ಮೀರಾಸಾಬಿಹಳ್ಳಿ ಶಾಲೆಯಲ್ಲಿ ಉಪಾಧ್ಯಾಯರಾಗಿ ಕೆಲಸ ಮಾಡುತ್ತಿದ್ದರು. ಗುಜ್ಜಪ್ಪಸ್ವಾಮಿಗಳು ಶಾಸ್ತ್ರಿಗಳನ್ನು ಕಂಡಾಗ ಎಲ್ಲರಿಗೂ ನಮಸ್ಕಾರ ಹೇಳುವಂತೆ ಇವರಿಗೂ ಹೇಳುತ್ತಿದ್ದರು. ಆಗ ಶಾಸ್ತ್ರಿಗಳು ಗುಜ್ಜಪ್ಪನ ಬಗೆಗೆ ಹೆಚ್ಚು ತಲೆಕೆಡಿಸಿಕೊಂಡಿರಲಿಲ್ಲ. ಒಂದು ದಿನ ಪಟೇಲ್ ಬೊಮ್ಮಣ್ಣ, ಚಪ್ಪಡಿ–ಸೈಜುಕಲ್ಲುಗಳನ್ನು ಗಾಡಿಯಲ್ಲಿ ಹೇರಿಕೊಂಡು ಹೋಗುತ್ತಿದ್ದ. ಶಾಸ್ತ್ರಿಗಳು ವಿಚಾರಿಸಿದಾಗ ಗುಜ್ಜಪ್ಪಸ್ವಾಮಿಗಳಿಗೆ ಸಮಾಧಿ ಕಟ್ಟಲು ತೆಗೆದುಕೊಂಡು ಹೋಗುತ್ತಿರುವುದಾಗಿ ಪ್ರತ್ಯುತ್ತರ ಬಂದಿತು. 'ಬರೋ ಸೋಮವಾರ ಅವರು ದೇಹ ಬಿಡ್ತಾರಂತೆ' ಎಂಬ ವಿಷಯ ಕೇಳಿದಾಗ ಶಾಸ್ತ್ರಿಗಳಿಗೆ ಅಚ್ಚರಿ ಆಯಿತು. ಆ ಸೋಮವಾರ ಬಂತು. ಶಾಸ್ತ್ರಿಗಳು ಬೊಮ್ಮಣ್ಣನನ್ನು ವಿಚಾರಿಸಿದಾಗ 'ಶಿಷ್ಯರು ಎಲ್ಲೆಲ್ಲೂ ಇದ್ದಾರೆ. ಅವರು ಬರಲು ತಡವಾಗ್ತಿದೆ. ಆದ್ದರಿಂದ ಸ್ವಲ್ಪ ಸಮಯ ಕೊಡ್ರಿ' ಎಂದಾಗ 'ಗುರುವಾರಕ್ಕೆ ನಿಗದಿಯಾಗಿದೆ' ಎಂದು ಹೇಳಿದರು. ಆ ಗುರುವಾರವೂ ಬಂದಿತು. ಊರಿನ ಕೊನೆಯ ಭಾಗದಲ್ಲಿ ಗುಜ್ಜಪ್ಪನ ಗುಡಿಸಲು. ಎಲ್ಲೆಲ್ಲಿಂದಲೊ ಜನ ಬಂದು ಸೇರಿದ್ದಾರೆ. ಭಜನೆ ನಡೆಯುತ್ತಿದೆ. ಗುಜ್ಜಪ್ಪ ಹೊಸಬಟ್ಟೆ ತೊಟ್ಟು, ತಲೆಗೆ ವಲ್ಲಿ ಕಟ್ಟಿಕೊಂಡು, ಹಣೆಗೆ ವಿಭೂತಿ ಹಚ್ಚಿಕೊಂಡು ಕುಳಿತಿದ್ದಾರೆ. ಶಾಸ್ತ್ರಿಗಳು ಬಂದು ಇದನ್ನೆಲ್ಲಾ ನೋಡಿ ಶಾಲೆಗೆ ಹೋದರು. ಸಂಜೆ ಆಯಿತು. ರಾತ್ರಿ ಭಜನೆ ಸಾಗುತ್ತಿದೆ. ಬೆಳಗಿನ ಜಾವ ನಾಲ್ಕುಗಂಟೆ. ಶಾಸ್ತ್ರಿಗಳು ಗುಜ್ಜಪ್ಪನ ಗುಡಿಸಲ ಬಳಿ ಹೋದರು. ಐದರ ಸುಮಾರಿಗೆ ಮಂಗಳಾರತಿ ಆಯಿತು. ಗುಜ್ಜಪ್ಪ ಮಂಗಳಾರತಿ ಹಾಡನ್ನು ಹಾಡಿದರು. ಅನಂತರ ಎರಡು ಕೈಗಳನ್ನು ಕಿವಿಯ ಬಳಿ ತಂದು ನಿಶ್ಶಬ್ದವಾಗಿ ಕುಳಿತರು. ಇಬ್ಬರು ಯುವಕರು ಎದ್ದು ಬಂದು ಗುಜ್ಜಪ್ಪನವರ ಎರಡು ಭುಜಗಳನ್ನು ಹಿಡಿಯುವಂತೆ ಪಕ್ಕದಲ್ಲಿ ನಿಂತರು. ಗುಜ್ಜಪ್ಪ ಕಿವಿಗಳ ಬಳಿ ಕೈಗಳನ್ನು ಇಟ್ಟುಕೊಂಡು ಹತ್ತುಸಲ 'ಓಂ ನಮಃಶಿವಾಯ' ಎಂದು ಘೋಷಿಸಿದರು. ಕೊನೆಗೆ 'ಹಂ' ಎಂದು ಧ್ವನಿಮಾಡಿ ಸುಮ್ಮನಾದರು. ಜನ ಎದ್ದು ಬಂದು ಗುಜ್ಜಪ್ಪನ ದರ್ಶನವನ್ನು ಮಾಡಿದರು. ಬೆಳಗೆರೆ ಕೃಷ್ಣಶಾಸ್ತ್ರಿಗಳು ಎದ್ದುಬಂದು ನೋಡುತ್ತಾರೆ. ಅವರ ದೇಹದಲ್ಲಿ ಜೀವ ಇರಲಿಲ್ಲ. ಗುಜ್ಜಪ್ಪ 'ಇಚ್ಛಾಮರಣಿ'ಯಾಗಿ ತನ್ನ ದೇಹವನ್ನು ಬಿಟ್ಟಿದ್ದರು. ಈಗಲೂ ಆ ಗ್ರಾಮದಲ್ಲಿ ಗುಜ್ಜಪ್ಪನ ಸಮಾಧಿ ಉಂಟು. ಅದು ಈಗ ಜಾಗೃತಸ್ಥಳವಾಗಿದೆ.

ಇದು ಕಳೆದ ಅರುವತ್ತು ವರ್ಷಗಳ ಈಚೆಗೆ ನಡೆದ ಸತ್ಯಘಟನೆ. ಇಂಥವು ಎಲ್ಲೆಲ್ಲೊ ನಡೆದಿರಬೇಕು. 'ಇಚ್ಛಾಮರಣ' ಒಂದುಂಟೆಂದು ಈ ಘಟನೆಯು ಶ್ರುತಪಡಿಸುತ್ತದೆ.

■ ಪುರಂಜೀವಿ

## ಮಾತೇ ಮುತ್ತು

- ಸ್ವರ್ಗದ ಹಾದಿ ನರಕದಿಂದ ಹಾದುಹೋಗುತ್ತದೆ.

  —ಎಂ. ಗೋವಿಂದ ಪೈ

- ಅಧಿಕಾರ ಹೆಚ್ಚಿದಷ್ಟೂ ಅದರ ದುರುಪಯೋಗದ ಅಪಾಯ ಹೆಚ್ಚು.

  —ಎಡ್ಮಂಡ್ ಬರ್ಕ್

- ಅನ್ನವೇ ಧರ್ಮದ ಮೂಲ.

  —ದ.ರಾ. ಬೇಂದ್ರೆ

- ಮನುಷ್ಯನ ದೇಹಕ್ಕೆ ಎರಡು ಕಣ್ಣುಗಳಿರುವಂತೆ ಅವನ ಧರ್ಮಕ್ಕಿರುವ ಎರಡು ಕಣ್ಣುಗಳು ಅಹಿಂಸೆ ಮತ್ತು ಸತ್ಯ.

  —ಬುದ್ಧ

- ನಿಮಗೆ ಎಳ್ಳು ಕಾಳಿನಷ್ಟು ಆತ್ಮವಿಶ್ವಾಸ ಇದ್ದರೂ ಸಾಕು, ನಿಮಗೆ ಯಾವ ಕಾರ್ಯವೂ ಅಸಂಭವವಲ್ಲ.

  —ಯೇಸು

- ಸೋಮಾರಿತನದಲ್ಲಿ ಮಾತ್ರ ಶಾಶ್ವತ ನಿರಾಸೆಗೆ ಆಸ್ಪದವುಂಟು.

  —ಥಾಮಸ್ ಕಾರ್ಲೈಲ್

- ಅನುಭವದಿಂದ ಪಾಠ ಕಲಿಯಬೇಕಾದರೆ ತಪ್ಪು ಮಾಡಿ ಅದರ ಬೆಲೆಯನ್ನು ತೆರಬೇಕಾಗುತ್ತದೆ.

  —ಸಿಗ್ಮಂಡ್ ಫ್ರಾಯ್ಡ್

- ಸತ್ಯದಾ ನುಡಿ ತೀರ್ಥ.

  —ಸರ್ವಜ್ಞ